





ಹತ್ತಿಸೋರು ಇದ್ದಾರೆ. ಕೆಲವರಿಗೆ ಒಂದಾದರ ನಂತರ ಒಂದು ಹೀಗೆ ಐದಾರು ಸಿಗರೇಟ್‌ಗಳನ್ನು ರೇಟ್ ಎಷ್ಟಾದರೂ ಎಳೆಯುವವರು ಇದ್ದಾರೆ. ಇವರೂ ನಿಜವಾದ 'ಧಂ ಪತಿ'ಗಳು ಎನ್ನಬಹುದೆ? ಆದ್ರೆ ಗ್ರೇಟ್ ಅಲ್ಲ ಬಿಡಿ! ವಾಸಿನೇ ಮಾಡಿಕ್ಕಾಗದ ರೋಗ ತಗುಲಿದ್ರೆ ರಿಗ್ರೆಟ್ ಆಗ್ತಾರೆ ಅಷ್ಟೆ!

ಗಿಫ್ಟ್ ವಿಚಾರ ಹೇಳುವಾಗ ಎಂಜಿಲು ಕೈ ವಿಚಾರ ಬಂತು. ಜಿಪುಣರಿಗೆ ಹೇಳುವ 'ಎಂಜಿಲು ಕೈಯಲ್ಲಿ ಕಾಗೆಯನ್ನೂ ಓಡಿಸುವುದಿಲ್ಲ' ಎಂಬ ಗಾದೆ ಎಲ್ಲರಿಗೂ ತಿಳಿದಿರುವಂಥದ್ದೆ. ಜಾನಪದ ತ್ರಿಪದಿಗಳಲ್ಲಿ

ಕಣ್ಣೆಂಜಲ ಕಾಡೀಗಿ ಬಾಯೆಂಜಲವೀಳ್ಯಾವ|
ಯಾರೆಂಜಲುಂಡು ನನಮನವ ಹಡೆದೌವ್ವ|
ಬಾಯೆಂಜಲುಂಡು ಬೆಳೆದೇನ||

ಎಂಬ ಸಾಲುಗಳು ಇವೆ. 'ಎಂಜಿಲು' ಎಂದರೆ ಬಳಸಿದ, ರುಚಿ ನೋಡಿದ ಅಥವಾ ಊಟ ಮಾಡಿದ ಕೈ ಎನ್ನುವ ಅರ್ಥ ಬರುತ್ತದೆ. ಕಾಡಿಗೆ ಎಂದರೆ ಅರಣ್ಯಕ್ಕೆ, ಕಾನನಕ್ಕೆ, ವನಕ್ಕೆ ಎಂಬ ಪದಗಳು ಸುಳಿದು ತಕ್ಷಣ ಇದು ಕಾಡು ಅಲ್ಲ ಕಾಡಿಗೆ, ಕಣ್ಣಿಗೆ ಹಚ್ಚುವ ಕಣ್ಣುಕಪ್ಪು ಎನ್ನುವ ಅರ್ಥ ಬರುತ್ತದೆ. ಇಂದಿಗೆ ಕಾಡಿಗೆ ಪೆನ್ಸಿಲ್, ಬ್ರಷ್‌ಗಳಲ್ಲಿ ಬಂದಿದೆ. ನಮ್ಮ ಅಮ್ಮಂದಿರೆಲ್ಲ ಕಿರುಬೆರಳಲ್ಲೆ ಕಾಡಿಗೆಯಲ್ಲಿ ದೃಷ್ಟಿ ಬೊಟ್ಟನ್ನು ಇಡುತ್ತಿದ್ದವರು ಅಲ್ಲವೆ? 80ರ ದಶಕದ ಹಿಂದಿನ ಯಾವುದೇ ಮಕ್ಕಳ ಫೋಟೊಗಳನ್ನು ತೆಗೆದುಕೊಂಡರೂ ಕಾಡಿಗೆಯ ಕಡುಕಪ್ಪನ್ನು ನೋಡಬಹುದು. ನಂದಿಬಟ್ಟಲು ಹೂ, ಹರಳೆಣ್ಣೆ ಉಪಯೋಗಿಸಿ ಕೆಲವೊಮ್ಮೆ ಬಾದಾಮಿ ಉಪಯೋಗಿಸಿ ಕಾಡಿಗೆ ಮಾಡುತ್ತಿದ್ದರು. ಕಣ್ಣಿನ ಕಸ ತೆಗೆಯಲು ಕಾಡಿಗೆ ಉಪಯುಕ್ತ.

ಕೆಲವರು ಕಾಡಿಗೆ ಹಾಕಿಕೊಂಡರೆ ಸಂಜೆ ಆದರೂ ಹಾಗೆ ಇರುತ್ತಾರೆ ಕೆಲವರಿಗೆ ಕಾಡಿಗೆ ಬೇಗ ಸ್ಪ್ರೆಡ್ ಆಗಿ ರಾರ ಡ್ಯಾನ್ಸರ್ಸ್ ಆಗಿ ತಕ್ಷಣಕ್ಕೆ ಕಂಡು ಬಿಡುತಾರೆ. ಅದಕ್ಕೆ ಈಗ ವಾಟರ್‌ಪ್ರೂಫ್ ಕಾಡಿಗೆ ಬಂದಿರುವುದು. ಈ ಕಾಡಿಗೆ ಹಚ್ಚುವುದರಿಂದ ಕಣ್ಣಿನ ಆರೋಗ್ಯ ಮತ್ತು ಸೌಂದರ್ಯ ವೃದ್ಧಿಸುವುದರಲ್ಲಿ ಸಂಶಯವಿಲ್ಲ ಅನ್ನೊಳಿ.

ಚಂದ್ರಹಾಸನ ಕತೆಯಲ್ಲಿ ದುಷ್ಟಬುದ್ಧಿ ತನ್ನ ಮಗನಿಗೆ ಈ ಯುವಕನಿಗೆ ಬೆಳಗಾಗುವುದರೊಳಗೆ ವಿಷವನ್ನು ಕೊಡತಕ್ಕದ್ದು ಎಂದು ಕಾಗದ ಬರೆದು ಅವನ ಕೈಯಲ್ಲೆ ಕೊಟ್ಟಿರುತ್ತಾನೆ. ಚಂದ್ರಹಾಸ ಕುದುರೆ ಏರಿ ಬಂದು ಸುಸ್ತಾಗಿ ಪಾಪ ಮಲಗಿಕೊಂಡಿರುತ್ತಾನೆ. ಅದನ್ನು ಕಂಡ ದುಷ್ಟಬುದ್ಧಿಯ ಮಗಳು ವಿಷಯೆ ಆ ಪತ್ರವನ್ನು ಅವನಿಗೆ ತಿಳಿಯದಂತೆ ಓದಿ ಇಷ್ಟು ಸುಂದರನಿಗೆ ವಿಷವನ್ನು ಕೊಡುವುದೆ ಖಂಡಿತಾ ಇಲ್ಲ! ಎಂದು ತನ್ನ ಕಾಡಿಗೆಯಿಂದಲೆ ವಿಷವನ್ನು ಇದ್ದದ್ದನ್ನು ವಿಷಯೆಯನ್ನು ಎಂದು ತಿದ್ದಿಬಿಡುತ್ತಾಳೆ. ಅವನನ್ನು ಮದುವೆಯಾಗುತ್ತಾಳೆ. ಇದು ಕಾಡಿಗೆ ಮಾಡಿದ ಮಹಾಉಪಕಾರ ಅಲ್ವೆ! ಮಂತ್ರಿ ಚಂದ್ರಹಾಸನ ತಂದೆಯನ್ನು ಕೊಂದಿದ್ದ ಆದರೆ ಚಂದ್ರಹಾಸ ಅವನ ಮೇಲೆ ಮುಯ್ಯಿ ತೀರಿಸಿಕೊಳ್ಳಲೇ ಇಲ್ಲ. ಎಲ್ಲಾ ಸುಖಾಂತ್ಯವಾಯಿತು.

'ಕಣ್ಣೆಂಜಲ ಕಾಡಿಗೆ' ಎಂದರೆ ಅಮ್ಮ ಬಳಸಿದ ಕಾಡಿಗೆಯಲ್ಲಿ ಎಷ್ಟು ಜನರು ದೃಷ್ಟಿ ಬೊಟ್ಟು ಇರಿಸಿಕೊಂಡಿಲ್ಲ ಹೇಳಿ! ಕಾಡಿಗೆ ಒಂದೇ ಅಲ್ಲ ಅಮ್ಮ ಬಳಸಿದ ಎಲ್ಲವನ್ನೂ ನಾವು ಬಳಸಿದ್ದೇವೆ, ಬಳಸುತ್ತಿದ್ದೇವೆ. ನನ್ನ ಮಗ ಏಳೆಂಟು ತಿಂಗಳಿನವನು. ಆಗಷ್ಟೆ ರಾಗಿ ಮಾಲ್ಟ್ ಕೊಡಲು ಪ್ರಾರಂಭಿಸಿದ್ದೆ. ಅವನಿಗೆ ಹೊಟ್ಟೆ ಉಬ್ಬರವಾಗಿ ಒಂದೇ ಸಮನೆ ಅಳಲು ಪ್ರಾರಂಭಿಸಿದ. ಅತ್ತು ಅತ್ತು ಸುಸ್ತಾಗ್ತಾನೇನೋ ಅನ್ನುವ ಭಯದಿಂದ ಗೆಳತಿ, ಡಾಕ್ಟರ್ ವಿಶಾಲಾಕ್ಷಿಗೆ ಫೋನ್ ಮಾಡಿದಾಗ ಆಕೆ 'ಅಜವೈನನ್ನು ನೀವು ಜಗಿದು ಅದರ ಗಾಳಿಯನ್ನು ಅವನ ಬಾಯಿಗೆ ಊದಿ' ಎಂದರು. ಹಾಗೆ ಮಾಡಿದೆ. ಕಟ್ಟಿದ ಹೊಟ್ಟೆ ಭಾರೀ ಸದ್ದಿನೊಂದಿಗೇ ಬಿಟ್ಟಿತು, ಆರಾಮಾದ. ಇಂಥ ರೆಮಿಡಿಗಳನ್ನು ಹಿರಿಯರು ಎಷ್ಟೋ ಮಾಡಿರುತ್ತಾರೆ. 'ಹಡೆದೌವ್ವ ಬಾಯೆಂಜಲುಂಡು ಬೆಳೆದೇನ' ಎನ್ನುವ ತ್ರಿಪದಿಯ ಸಾಲು ಎಷ್ಟು ಸರಿ ಅಲ್ವ! ಈ ಮುಯ್ಯಿನ ಯಾರಾದ್ರೂ ತೀರಿಸೋಕ್ಕಾಗುತ್ತಾ? ■

